ಪೂರ್ತಿ ದೇವದಾಸ್ ಆಗಿದ್ದೀಯಲ್ಲೋ..' ಎಂದು ತುಸು ಬೇಸರದಿಂದಲೇ ಹೇಳಿದ. ನಾನೇನೂ ಉತ್ತರಿಸಲಿಲ್ಲ. 'ಲೋ ಮೌನಿ.. ಈ ಪ್ರೀತಿ, ಪ್ರೇಮ ಎಲ್ಲಾ ಮನಸ್ಸಿನ ಭ್ರಮೆಗಳು ಕಣೋ.. ನಿಜವಾದ ಜೀವನಾನೇ ಬೇರೆ.. ಈ ಪ್ರಪಂಚದಲ್ಲಿ ಹೆಣ್ಣಿಗೊಂದು ಗಂಡು, ಗಂಡಿಗೊಂದು ಹೆಣ್ಣು ಸೃಷ್ಟಿಯಾಗಿರ್ತಾರೆ.. ಅವರ ಸುಪ್ತ ಮನಸ್ಸಿನಲ್ಲಿ ಇರೋದು ಪ್ರಕೃತಿ ಸಹಜವಾದ ಕಾಮ ಕಣೋ.. ಅದನ್ನ ಈಡೇರಿಸಿಕೊಳ್ಳೋದಿಕ್ಕೆ ಪ್ರೀತಿಯ ನಾಟಕ ಆಡ್ತಾರೆ.. ತಮ್ಮ ಕಾಮವನ್ನು ತಣಿಸಿಕೊಳ್ತಾರೆ.. ಕಾಮ ಹೆಣ್ಣುಗಂಡನ್ನ ಒಟ್ಟಿಗೆ ಇರೋ ತರಾ ಮಾಡುತ್ತೆ.. ಅದರಿಂದ ಮಕ್ಕಳನ್ನು ಹುಟ್ಟಿಸಿ ಅವುಗಳನ್ನು ಸಾಕಿ ಯಾವೊತ್ತೋ ಒಂದು ದಿನ ಸತ್ತುಹೋಗ್ತಾರೆ.. ಇದು ಮನುಷ್ಯಜೀವಿ ಈ ಪ್ರಪಂಚದಲ್ಲಿ ಅಸ್ತಿತ್ವದಲ್ಲಿರೋವರ್ಗೆ ನಡೀತಾನೆ ಇರುತ್ತೆ.. ಅಷ್ಟೇ.. ಜೀವನ ಅಂದ್ರೆ ಅಷ್ಟೇ.. ನಿನ್ನನ್ನ ಕೂಡುವ ಯಾವುದೋ ಒಂದು ಹೆಣ್ಣು ಈ ಪ್ರಪಂಚದಲ್ಲಿ ಸೃಷ್ಟಿಯಾಗಿರ್ತಾಳೆ.. ಯೋಚ್ನೆ ಮಾಡ್ಬೇಡ..' ಎಂದು ತತ್ವಜ್ಞಾನಿಯಂತೆ ಉಪದೇಶ ಮಾಡಿದ. ನನಗೆ ಅವನ ಸಿದ್ಧಾಂತ ತುಸು ಸಮಂಜಸವೆನಿಸಿದರೂ ಪೂರ್ತಿಯಾಗಿ ಇಷ್ಟವಾಗಲಿಲ್ಲ.

ಹೇಗೋ ಪರೀಕ್ಷೆಯ ಹಿಂದಿನ ದಿನಗಳು ಮಾತ್ರ ಪುಸ್ತಕ ಹಿಡಿದು ಕುಳಿತು ಪರೀಕ್ಷೆ ಬರೆದು ಪಾಸಾಗಿ ಸ್ನಾತಕೋತ್ತರ ಪದವೀಧರನಾದೆ ಎಂಬುದೇ ಅಂದಿನ ನನ್ನ ದೊಡ್ಡ ಸಾಧನೆ.

ಮೈಸೂರಿನಿಂದ ಬಂದು ನಮ್ಮ ಊರಿನಲ್ಲಿ ವಾಸ್ತವ್ಯ ಹೂಡಿದ ಮೇಲೂ ನನ್ನ ಮದ್ಯವ್ಯಸನ ಮುಂದುವರೆಯಿತು. ಮದ್ಯಕ್ಕೆ ನಾನು ಸಂಪೂರ್ಣವಾಗಿ ಶರಣಾಗಿ ಹೋಗಿದ್ದೆ. ಇದರಿಂದ ತೀವ್ರವಾಗಿ ಆಘಾತಗೊಂಡ ಅಮ್ಮನಿಗೆ ಚಿಂತೆ ಶುರುವಾಯಿತು. ನನ್ನ ಮುಂದೆ ಕುಳಿತು ಕಣ್ಣೀರು ಹಾಕಿ ಬುದ್ಧಿ ಹೇಳಿ ನನ್ನನ್ನು ತಿದ್ದಲು ಪ್ರಯತ್ನಿಸಿದಳು. ಅಂತಹ ಸಮಯದಲ್ಲಿ ನಾನು ಮದ್ಯವನ್ನು ಬಿಟ್ಟುಬಿಡಬೇಕು ಎಂದು ನಿರ್ಧರಿಸಿಕೊಳ್ಳುತ್ತಿದ್ದೆ. ಆದರೆ ಅದು ತಾತ್ಕಾಲಿಕ ವಾಗಿರುತಿತ್ತು. ಸಂಜೆಯಾಗುತ್ತಿದ್ದಂತೆ ನನ್ನನ್ನು ಅದು ಇನ್ನಿಲ್ಲದಂತೆ ಸೆಳೆಯುತಿತ್ತು. ನಾನು ಮದ್ಯವನ್ನು ಹೇಮಾಳಿಗಿಂತ ಹೆಚ್ಚು ಹೆಚ್ಚು ಪ್ರೀತಿಸತೊಡಗಿದ್ದು ಒಂದು ವಿಪರ್ಯಾಸವೇ ಆಗಿದ್ದಿತು.

ನಮ್ಮ ಊರಿನಲ್ಲಿ ಯಾವುದಾದರೂ ಬಾರಿಗೆ ಹೋಗಲು ನನಗೆ ತೀವ್ರ ಹಿಂಜರಿಕೆಯಾಗುತಿತ್ತು. ಸಂಜೆಯಾಗುತ್ತಿದ್ದಂತೆ ಬೈಕು ಹತ್ತಿ ಯಾವುದೋ ಮದ್ಯದ ಅಂಗಡಿಯಲ್ಲಿ ಮದ್ಯದ ಬಾಟಲುಗಳನ್ನು ತೆಗೆದುಕೊಂಡು ನಮ್ಮ ತೆಂಗಿನ ತೋಟದ ಮನೆಗೆ ಹೊರಟು ಬಿಡುತ್ತಿದ್ದೆ. ರಾತ್ರಿ ಎಷ್ಟೋ ಹೊತ್ತಾದ ಮೇಲೆ ಮನೆಗೆ ಹಿಂತಿರುಗುತ್ತಿದ್ದೆ. ಅಮ್ಮ ಎಲ್ಲವನ್ನೂ ತಿಳಿದು ಏನೂ ಮಾಡದವಳಾಗಿ ಬರೀ ಕಣ್ಣೀರು ಹಾಕತೊಡಗಿದಳು. ನಾನು ತೋಟದ ಮನೆಗೆ ಹೋಗಲು ಇನ್ನೂ ಒಂದು ಕಾರಣವಿತ್ತು. ಅಲ್ಲಿ ತೋಟವನ್ನು ನೋಡಿಕೊಳ್ಳಲು ಒಂದು ಕುಟುಂಬ ವಾಸವಾಗಿತ್ತು. ಈರಪ್ಪ ಮತ್ತು ಸಾಕವ್ವ ಎಂಬ ವಯಸ್ಸಾದ ದಂಪತಿಗಳು (ನಾನು ಚಿಕ್ಕವನಿದ್ದಾಗಿನಿಂದಲೂ) ಅಲ್ಲಿ ಗುಡಿಸಲು ಕಟ್ಟಿಕೊಂಡು ನೆಲೆಸಿದ್ದರು. ಅವರಿಗೆ ಆರು ಜನ ಹೆಣ್ಣುಮಕ್ಕಳು. ಎಲ್ಲಾ ಹೆಣ್ಣುಮಕ್ಕಳು ಮದುವೆಯಾಗಿ ಬೇರೆ ಬೇರೆ ಊರಿನಲ್ಲಿದ್ದರು. ಅವರಲ್ಲಿ ಮಾಯಿ (ಮಾಯಮ್ಮ) ಕೊನೆಯವಳು. ಅವಳು ನನಗಿಂತ ಹತ್ತು ವರ್ಷ ದೊಡ್ಡವಳಿರಬೇಕು. ನಾನು ಚಿಕ್ಕವನಿದ್ದಾಗಲೇ ಅವಳ ನಗ್ನ ದೇಹವನ್ನು ನೋಡಿಬಿಟ್ಟಿದ್ದೆ.

ಅಪ್ಪ ಸತ್ತ ಮೇಲೆ ಅಜ್ಜಿ ನನ್ನನ್ನು ಎಲ್ಲಿಯೂ ಒಂಟಿಯಾಗಿ ಬಿಟ್ಟು ಹೋಗುತ್ತಿರಲಿಲ್ಲ. ಅಮ್ಮ ಅಡುಗೆ ಕೆಲಸದಲ್ಲಿ ನಿರತಳಾಗಿರುತ್ತಾಳೆ ಎಂದು ನನ್ನನ್ನು ಅವರ ಜೊತೆಯೇ ಕರೆದುಕೊಂಡು ಹೋಗುತ್ತಿದ್ದರು. ಒಂದು ದಿನ ನನ್ನನ್ನು ಕರೆದುಕೊಂಡು ನಮ್ಮ ತೆಂಗಿನ ತೋಟದ ಬಳಿ ಬಂದರು. ಮಾಯಿಯ ಅಪ್ಪ ಅವ್ವ ತೋಟದಲ್ಲಿ ದೂರದಲ್ಲಿ ಕೆಲಸ ಮಾಡುತ್ತಿದ್ದರು. ಮಾಯಿಯ ಅಕ್ಕಂದಿರಿಗೆಲ್ಲಾ ಅಷ್ಟು ಹೊತ್ತಿಗೆ ಮದುವೆಯಾಗಿತ್ತು. ಅವರ ಗುಡಿಸಲಿನ ಬಳಿ ಮಾಯಿ ಒಬ್ಬಳೇ ಇದ್ದಳು. ಅಜ್ಜಿ ತೋಟದ ಒಳಗೆ ಹೋಗಿ ಬರ್ತೀನಿ.. ನಮ್ಮ ಸಣ್ಣಯ್ಯನನ್ನ ಜೋಪಾನವಾಗಿ ನೋಡ್ಕೋಬೇಕು.. ಎಂದು ಆಜ್ಞಾಪಿಸಿ ನನ್ನನ್ನು ಮಾಯಿಯ ಬಳಿ ಬಿಟ್ಟು ಹೋದರು. ಅಜ್ಜಿ ಬರುವುದು ತಡವಾಯಿತು. ಮಾಯಿ ಸ್ನಾನ ಮಾಡಲೆಂದು ಮಡಕೆಯಲ್ಲಿ ನೀರು ಕಾಯಿಸಿದ್ದಳು. ಅಜ್ಜಿಯ ಹೆದರಿಕೆಯಿಂದಲೋ ಏನೋ ಅವಳು ನನ್ನನ್ನು ಗುಡಿಸಲ ಹಿಂದಿದ್ದ ಸ್ನಾನದ ಚೌಕಟ್ಟಿಗೆ ನನ್ನನ್ನೂ ಕರೆದುಕೊಂಡು ಹೋಗಿ ಕುಳ್ಳಿರಿಸಿಕೊಂಡು ಬತ್ತಲಾಗಿ ಸ್ನಾನ ಮಾಡಲು ಶುರುವಾದಳು. ಅವಳ ದೇಹಕ್ಕೂ ನನ್ನ ದೇಹಕ್ಕೂ ಇದ್ದ ವ್ಯತ್ಯಾಸವನ್ನು ಕಂಡು ನನಗೆ ಅಚ್ಚರಿಯಾಗಿ ಅವಳನ್ನು ಏನೇನೋ ಪ್ರಶ್ನೆಗಳನ್ನು ಕೇಳಿಬಿಟ್ಟಿದ್ದೆ. ಅವಳು ನಗುತ್ತಲೇ ಉತ್ತರಿಸಿ ಸ್ನಾನ ಮುಗಿಸಿದ್ದಳು.

ಮಾಯಿಗೂ ಮದುವೆಯಾಗಿ ಎರಡು ಚಿಕ್ಕಮಕ್ಕಳಿದ್ದರು. ಅವಳ ಗಂಡ ಇವಳ ಹೊಟ್ಟೆಯಲ್ಲಿ ಎರಡು ಮಕ್ಕಳು ಹುಟ್ಟಿದ ಮೇಲೆ ಅವಳಿಗೆ ತಿಳಿಯದಂತೆ ಇನ್ನೊಂದು ಹೆಣ್ಣನ್ನು ಮದುವೆಯಾಗಿ ಮೋಸ ಮಾಡಿದನಂತೆ. ಅದನ್ನು ಸಹಿಸಲಾಗದೇ ಅವಳು ಅವನನ್ನು ಬಿಟ್ಟು ತನ್ನ ಎರಡು ಮಕ್ಕಳನ್ನೂ ತಂದೆ ತಾಯಿಯ ಬಳಿ ಕರೆದುಕೊಂಡು ಬಂದು ನಮ್ಮ ತೋಟದ ಮನೆಯ ಗುಡಿಸಲಿನಲ್ಲಿಯೇ ನೆಲೆಸಿದ್ದಳು. ಹತ್ತಿರವಿದ್ದ ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಿ ಓದಿಸುತ್ತಾ ಎಲ್ಲಾ ನೋವುಗಳನ್ನು ನುಂಗಿಕೊಂಡು ನಗುತ್ತಲೇ ಇರುತಿದ್ದಳು. ನನಗೆ ಮದ್ಯಪಾನ ಮಾಡಿದ ನಂತರ ನನ್ನ ಭಗ್ನಪ್ರೇಮದ ಬಗ್ಗೆ ಹೇಳಿಕೊಂಡು ದುಃಖಿಸಲು ಒಳ್ಳೆಯ ಗೆಳತಿ ಸಿಕ್ಕಂತಾಗಿತ್ತು. ಮಾಯಿಯೂ ಅದೆಲ್ಲಾ ಮುಗ್ದುಹೋಗಿರೋದು.. ಮತ್ತೆ ಬರ್ತದಾ.. ಈಗ ಕುಡಿಯೋದೆಲ್ಲಾ ಬಿಟ್ಟುಬಿಡಿ ಸಣ್ಣಯ್ಯಾ.. ನಿಮ್ ದಮ್ಮಯ್ಯಾ ಅಂತೀನಿ.. ಜೀವುನದಲ್ಲಿ ಏನೈತೆ.. ಏನೂ ಇಲ್ಲಾ.. ಎಲ್ಲಾ ನಮ್ ನಮ್ ಹಣೆಬರ.. ನಾವು ಅಂದುಕಂಡಂಗೆ ಏನೂ ನಡೆಯೋದಿಲ್ಲ.. ನಾವು ಪಡಕಂಡು ಬಂದಿದ್ದನ್ನ ಅನುಭವಿಸ್ಬೇಕು... ಏನಾಗ್ಬೇಕೋ ಅದು ಆಗೇ ಆಯ್ತದೆ.. ನಮ್ ಕೈಲಿ ಅದನ್ನ ಬದಲಾಯಿಸಕ್ಕೆ ಆಗಲ್ಲ.. ಅದುನ್ನ ತಿಳ್ಕಂಡು ಏನಾಯ್ತದೋ ಅದನ್ನ ಆಗೋದೆಲ್ಲಾ ಒಳ್ಳೇದಕ್ಕೆ ಅನ್ಕಂಡು ಮುಂದಕ್ಕೆ ಹೋಗ್ಬೇಕು.. ನಿಮಗೇನು ಕಮ್ಮಿ.. ನೋಡೋಕೆ ರಾಜಕುಮಾರುನ ತರಾ ಇದೀರಿ.. ಮಾರಾಣಿಯಂತ ಹುಡುಗಿ ಸಿಕ್ತಾಳೆ.. ಮದ್ವೆ ಮಾಡ್ಕೊಂಡು ಸುಖವಾಗಿರಿ.. ಅಮ್ಮಾರಿಗೆ ನಿಮ್ದೇ ಚಿಂತೆಯಾಗ್ಬುಟ್ಟೈತೆ.. ಅವರ ಮನ್ಸಿಗೆ ನೋವು ಕೊಡ್ಬೇಡಿ .. ಎಂದು ಆಗಾಗ ಹಣೆಬರಹದ ಸಿದ್ಧಾಂತವನ್ನು ನಂಬಿ ನನಗೆ ಬುದ್ಧಿ ಹೇಳುತ್ತಿದ್ದಳು. ಆದರೆ ನನಗೆ ಆಗ ಯಾರ ಮಾತುಗಳೂ ತಲೆಯ ಒಳಗೆ ಹೋಗುತ್ತಿರಲಿಲ್ಲ.

ಅಮ್ಮ ನನಗೂ ವಯಸ್ಸಾಯ್ತು.. ಈ ಅಂಗಡಿ ತೋಟ ಮನೆ ನೋಡಿಕೊಳ್ಳೋಕೆ ಆಗ್ತಾ ಇಲ್ಲಾ.. ಪೈಂಟ್ ಅಂಗಡಿ ನಿನ್ನ ಸುಪರ್ದಿಗೆ ಬಿಟ್ಟು ಬಿಡ್ತೀನಿ.. ಹೋಗಿ ಅಲ್ಲಿ ಕುತ್ಕೊಂಡು ವ್ಯಾಪಾರ ನೋಡ್ಕೋ.. ಎಂದು ಪೀಡಿಸುತಿದ್ದಳು. ಮತ್ತೊಮ್ಮೆ ಎಲ್ಲಾದ್ರೂ ಒಂದು ಒಳ್ಳೇ ಹುಡುಗಿ ಹುಡುಕ್ತೀನಿ.. ಮದ್ವೆನಾದ್ರೂ ಮಾಡ್ಕೊಂಡು ಬಿಡು ಎಲ್ಲಾ ಸರಿಹೋಗುತ್ತೆ.. ಎಂದು ಅಲವತ್ತುಕೊಳ್ಳುತ್ತಿದ್ದಳು. ನಾನು ಯಾವುದನ್ನೂ ಕಿವಿಗೆ ಹಾಕಿಕೊಳ್ಳದೆ ನನ್ನ ಪಾಡಿಗೆ ನಾನು ಕುಡಿದುಕೊಂಡು ಇರುವುದನ್ನು ನೋಡಿ ಒಬ್ಬಳೇ ಕುಳಿತುಕೊಂಡು ರೋದಿಸುತ್ತಿದ್ದಳು. ಕೊನೆಗೆ ನನ್ನನ್ನು ಊರು ಬಿಡಿಸಿ ತಾತ್ಕಾಲಿಕವಾಗಿ ಯಾವುದಾದಾರೂ ಕೆಲಸಕ್ಕೆ ಸೇರಿಸಿದರೆ ಸರಿ ಹೋಗಬಹುದು ಎಂದು ಕಂಡ ಕಂಡವರನ್ನು ಬೇಡಿಕೊಳ್ಳತೊಡಗಿದಳು. ನಮ್ಮ ದೊಡ್ಡಮ್ಮನ ಮಗ ಸುಬ್ಬಣ್ಣನಿಗೆ ಅಮ್ಮನನ್ನು ಕಂಡರೆ ಬಹಳ ಪ್ರೀತಿ. ಅವನ ಮೂಲಕ ಸುನಿಲ್ ಸಾರ್ ಮತ್ತು ಶರಧಿಯಕ್ಕ ಪರಿಚಯವಾಗಿ ನನ್ನ ಬದುಕು ಹಸನಾಯಿತು.

* * * *

ಬೇಗ ಒಂದು ಮದ್ವೆಯಾಗಿಬಿಡು ಗಿರಿ.. ಎಂದು ಸುನಿಲ್ ಸಾರ್ ಮತ್ತು

## ಮದುವೆ, ವಿಚ್ಛೇದನ

ಗಂಟು
ಹಾಕಿಸಿದವ
ಪೂಜಾರಿ,
ಗಂಟು
ಬಿಡಿಸಿದವ
ನ್ಯಾಯಾಧೀಶ!

★ ಬಾಲು ಪಟಗಾರ

